**ಟಿ.ನರಸೀಪುರದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ**

**ಸಿ.ಸಿ. ನಂ.554/2025**

ಪಿರ್ಯಾದುದಾರರು : ಶ್ರೀ ಸುರೇಶ.ಎಸ್,
ಬಿನ್ ಸಿದ್ದರಾಜು,
ಸುಮಾರು 40 ವರ್ಷ,
ವಾಸಃ ವಿದ್ಯಾನಗರ,
ಟಿ.ನರಸೀಪುರ ಟೌನ್,
ಮೈಸೂರು ಜಿಲ್ಲೆ.

-ವಿರುದ್ಧ-

ಆರೋಪಿ : ಶ್ರೀ ರಾಜೇಶ,
ಬಿನ್ ಕರೇಗೌಡ,
ಸುಮಾರು 37 ವರ್ಷ,
ವಾಸಃ ಚಿಟಗಯ್ಯನಕೊಪ್ಪಲು ಗ್ರಾಮ,
ಸೋಸಲೆ ಹೋಬಳಿ,
ಟಿ.ನರಸೀಪುರ ತಾಲ್ಲೂಕು,
ಮೈಸೂರು ಜಿಲ್ಲೆ.

**ಭಾ ದಂ ಪ್ರ ಸಂ ಕಲಂ.313 ರ ಅಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರ:1: ಈ ಮೊಕದ್ದಮೆಯಲ್ಲಿ ವಿಚಾರಣೆ ಆಗಿರುವ ಅಭಿಯೋಜನೆ ಪರ ಸಾಕ್ಷಿದಾರರ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

ಉ:

ಪ್ರ:2: ಫ್ರಾಸಾ-1 ಶ್ರೀ ಸುರೇಶ.ಎಸ್, ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಪಿರ್ಯಾದುದಾರರಿಂದ ದಿನಾಂಕ 24.07.2024 ರಂದು ರೂ.3,00,000/- ಹಣವನ್ನು ನಿಮ್ಮ ಕೌಟುಂಬಿಕ ಅವಶ್ಯಕತೆಗಾಗಿ, ಮುಬೈ ಸಾಲ ತೀರಿಸಲು, ಚಿಲ್ಲರೆ ಅಂಗಡಿ ಮತ್ತು ಬಿಂದು ಜೀರ ಡಿಸ್ಟ್ರಿಬ್ಯೂಷನ್ ವ್ಯವಹಾಕ್ಕಾಗಿ ಸಾಲವನ್ನು ಪಡೆದಿದ್ದು, ಸದರಿ ಸಾಲವನ್ನು 2½ ತಿಂಗಳ ಅವಧಿಯೊಳಗೆ ಹಿಂದಿರುಗಿಸುವುದಾಗಿ ಒಪ್ಪಿಕೊಂಡಿದ್ದು, ಅದೇ ದಿನ ಸದರಿ ಸಾಲದ ಮರುಪಾವತಿಗಾಗಿ ರೂ.3,00,000/- ರಂತೆ ದಿನಾಂಕ 10.10.2024 ರ ದಿನಾಂಕವನ್ನು ನಮೂದಿಸಿದ ನಿಮ್ಮ ಬ್ಯಾಂಕ್ ಖಾತೆಯುಳ್ಳ ಕೆನರಾ ಬ್ಯಾಂಕ್, ಟಿ.ನರಸೀಪುರ ಶಾಖೆಯ ಚೆಕ್ ನಂ.399083 ನ್ನು ಅವರಿಗೆ ನೀಡಿರುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

ಉಃ

ಪ್ರ:3: ಫ್ರಾಸಾ-1 ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ ಅವರು ದಿನಾಂಕ 29.10.2024 ರಂದು ಸದರಿ ಚೆಕ್ಕನ್ನು ಪಿರ್ಯಾದುದಾರರು ತಮ್ಮ ಬಾಬ್ತು ಕರ್ನಾಟಕ ಬ್ಯಾಂಕ್ ಲಿ., ಟಿ.ನರಸೀಪುರ ಶಾಖೆಯ ಖಾತೆಗೆ ನಗಧೀಕರಣಕ್ಕಾಗಿ ಸಲ್ಲಿಸಿದಾಗ, '**ಖಾತೆ ನಿರ್ಬಂಧಿತ ಪರಿಸ್ಥಿತಿ 2125 ಅನ್ನು ಒಳಗೊಂಡಿದೆ (Account Blocked situation covered 2125)'** ಎಂಬ ಮಾಹಿತಿಯೊಂದಿಗೆ ಚೆಕ್ ಅಮಾನ್ಯಗೊಂಡು ದಿನಾಂಕ 30.10.2024 ರಂದು ಸದರಿ ಚೆಕ್ಕು ವಾಪಸ್ಸು ಬಂದಿರುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

ಉಃ

ಪ್ರ:4: ಫ್ರಾಸಾ-1 ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ ನಂತರ ದಿನಾಂಕ 28.11.2024 ರಂದು ನಿಮಗೆ ವಕೀಲರ ಮುಖಾಂತರ ನೋಟೀಸು ಕಳಿಸಿ ಸಾಲದ ಹಣವನ್ನು ಮರುಪಾವತಿ ಮಾಡಬೇಕೆಂದು ಕೇಳಿದ್ದು, ಆದರೆ ನೀವು ಇದುವರೆಗೂ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎನ್ನುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

ಉಃ

ಪ್ರ:5:ಈ ಪ್ರಕರಣದ ವಿಚಾರವಾಗಿ ಏನಾದರೂ ಹೇಳುವುದು ಇದೆಯೆ?

ಉಃ

ಪ್ರ:6:ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಅಥವಾ ದಾಖಲೆಗಳನ್ನು ಹಾಜರುಪಡಿಸುತ್ತೀರಾ?

ಉಃ

**[ಮೇಲ್ಕಂಡ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ತೆರೆದ ನ್ಯಾಯಾಲಯದಲ್ಲಿ ಅವರಿಗೆ ಓದಿ ಹೇಳಿದ ನಂತರ ಉತ್ತರಗಳನ್ನು ಅವರು ಹೇಳಿದಂತೆ ದಾಖಲಿಸಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.]**

ದಿನಾಂಕಃ 23.04.2025.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**
**ಟಿ.ನರಸೀಪುರ.** **

**